


ಬೆಂಗಳೂರಿನ ಕಿದ್ವಾಯಿ ಸ್ಮಾರಕ ಕ್ಯಾನ್ಸರ್ ಸಂಸ್ಥೆಯಲ್ಲಿ ಸ್ಥಾಪಿಸಲಾಗಿರುವ ರೊಬಾಟಿಕ್ ಆರ್ಮ್ ಜೊತೆ ಡಾ.ಕೃಷ್ಣಮೂರ್ತಿ ಚಿತ್ರ: ರಂಜು ಪಿ.

ಬದಲಾವಣೆ ನಿರಂತರ. ಕಾಲದ ನಾಗಾಲೋಟದ ಜತೆಗೆ ಈ ಬದಲಾವಣೆಯಿಂದಾಗಿ ಇಂದು ಎಲ್ಲ ಕ್ಷೇತ್ರಗಳಲ್ಲಿ ಅಭೂತಪೂರ್ವ ಬೆಳವಣಿಗೆಗಳು ಆಗುತ್ತಿವೆ. ವೈದ್ಯಕೀಯ ರಂಗದಲ್ಲೂ ಕ್ರಾಂತಿಕಾರಿ ವಿದ್ಯಮಾನಗಳು ಸಂಭವಿಸುತ್ತಿವೆ. ವಿಜ್ಞಾನ– ತಂತ್ರಜ್ಞಾನ ಮತ್ತು ಮಾಹಿತಿ – ತಂತ್ರಜ್ಞಾನದ ನೆರವಿನೊಂದಿಗೆ ವೈದ್ಯಕೀಯ ಕ್ಷೇತ್ರ ಹೊಸ ಆವಿಷ್ಕಾರಗಳತ್ತ ದಾಪುಗಾಲು ಹಾಕುತ್ತಿದೆ. ತಂತ್ರಜ್ಞಾನದ ಮುನ್ನಡೆ ನಾವು ಕಲ್ಪಿಸಿಕೊಳ್ಳಲೂ ಆಗದ ಹಲವು ಸಾಧ್ಯತೆಗಳನ್ನು ಆಗುಮಾಡುತ್ತಿದೆ.

ಆರೋಗ್ಯ ತಂತ್ರಜ್ಞಾನ ಬಹಳಷ್ಟು ಮುಂದುವರಿದಿದೆ. ಅದೇ ವೇಳೆ ಕಾಯಿಲೆಗಳ ಸಂಖ್ಯೆಯೂ ಗಣನೀಯವಾಗಿ ಹೆಚ್ಚುತ್ತಿದೆ. ಹಿಂದೆ ಯಾರೂ ಕಂಡು ಕೇಳರಿಯದ ಅನೇಕ ಕಾಯಿಲೆಗಳು, ವೈರಸ್‌ಗಳು, ಬ್ಯಾಕ್ಟೀರಿಯಾಗಳ ಹಾವಳಿಯಿಂದಾಗಿ ಇಂದು ಒಬ್ಬ ವ್ಯಕ್ತಿಯನ್ನು ಆತ ‘ಆರೋಗ್ಯವಂತ’ ಎಂದು ಪ್ರಮಾಣೀಕರಿಸುವುದು ಕಷ್ಟವಾಗುತ್ತಿದೆ. ಜೀವನಶೈಲಿಯ ರೋಗಗಳು ಎಂಬ ಹೊಸ ವಿಭಾಗವೇ ಹುಟ್ಟಿಕೊಂಡಿದೆ.

ರೋಗಗಳನ್ನು ಎದುರಿಸಲು ನಾವೀಗ ಹೆಚ್ಚು ಹುಮ್ಮಸ್ಸಿನಿಂದ ಸಜ್ಜಾಗಿದ್ದೇವೆ. ಔಷಧಿಗಳು ಇಂದು ಮೊಬೈಲ್ ಆ್ಯಪ್ ಮೂಲಕ ಅಥವಾ ಕಂಪ್ಯೂಟರ್‌ನ ಒಂದು ಬಟನ್ ಒತ್ತಿದರೆ ಮನೆ ಬಾಗಿಲಿಗೆ ಬಂದು ಬೀಳುತ್ತಿವೆ. ರೋಗ ಪತ್ತೆಗೆ ಡಿಜಿಟಲ್ ಡಯಗ್ನಾಸ್ಟಿಕ್ಸ್ ಬಂದಿದೆ, ಸ್ಮಾರ್ಟ್ ಆಸ್ಪತ್ರೆಗಳು ತಲೆ ಎತ್ತಿವೆ. ಸಣ್ಣದಾಗಿ ಎದೆನೋವು ಬಂದರೂ ಸಾಕು, ಅತ್ಯಾಧುನಿಕ ಚಿಕಿತ್ಸೆ ನೀಡುವವರು ಸಿದ್ಧರಿದ್ದಾರೆ. ವೈದ್ಯರ ಹಸ್ತದ ಅಗತ್ಯವೇ ಇಲ್ಲದಂತೆ ರೋಬೊ ಸರ್ಜರಿಗಳು ಯಶಸ್ವಿಯಾಗಿ ನಡೆಯುತ್ತಿವೆ. ಹೊಸ ಹೊಸ ವೈರಸ್, ಬ್ಯಾಕ್ಟೀರಿಯಾಗಳು ದೇಹದ ಮೇಲೆ ದಾಳಿ ನಡೆಸಿದರೂ ಕೂಡಲೇ ಆ್ಯಂಟಿ ಬಯಾಟಿಕ್‌ಗಳು ಕೆಲಸ ಮಾಡತೊಡಗುತ್ತವೆ. ಹೃದಯ, ಮೆದುಳು, ಕಿಡ್ನಿ, ಕರುಳು, ಪಿತ್ತಜನಕಾಂಗ, ಶ್ವಾಸಕೋಶ... ಹೀಗೆ ದೇಹದ ಯಾವುದೇ ಅಂಗಕ್ಕೆ ಹಾನಿಯಾದರೂ ಆಯಾಯ ಅಂಗಕ್ಕೇ ಬೇಕಾದ ‘ಬಿಡಿ ಬಿಡಿ’ ಯಾದ ಅತ್ಯಾಧುನಿಕ ಚಿಕಿತ್ಸೆ ಇಂದು ಅಲೋಪತಿಯಲ್ಲಿ ಲಭ್ಯವಾಗುತ್ತಿದೆ.

ಹತ್ತು ವರ್ಷಗಳ ಹಿಂದಿನ ಆರೋಗ್ಯ ಕ್ಷೇತ್ರದ ಸೌಲಭ್ಯಗಳಿಗೆ ಹೋಲಿಸಿದರೆ ಇಂದು ಅಜಗಜಾಂತರ ವ್ಯತ್ಯಾಸ ಕಾಣಬಹುದು. ಮುಂದಿನ 10 ವರ್ಷಗಳಲ್ಲಿ ಈ ಪ್ರಗತಿ ಇನ್ನು ಹೇಗಾಗಬಹುದು? ಈಗಿನ ಹೊಸ ತಂತ್ರಜ್ಞಾನದ ಬಳಕೆಯ ವೇಗ ನೋಡಿದರೆ ಅದನ್ನು ಊಹಿಸುವುದೂ ಕಷ್ಟ ಎನ್ನುವಂತಹ ಪರಿಸ್ಥಿತಿ ಇದೆ. ಈ ನಿಟ್ಟಿನಲ್ಲಿ ವಿಜ್ಞಾನಿಗಳ, ತಂತ್ರಜ್ಞಾನಿಗಳ, ತಾಂತ್ರಿಕ ತಜ್ಞರ, ವೈದ್ಯರ, ಪರಿಣತರ ಸಂಘಟಿತ ಪರಿಶ್ರಮ ಎದ್ದು ಕಾಣುತ್ತಿದೆ. ವೈದ್ಯಕೀಯ ಕ್ಷೇತ್ರದ ಹೊಸ ಅನ್ವೇಷಣೆಗಳ ದೊಡ್ಡದೊಂದು ಪಟ್ಟಿ ಪ್ರತಿ ವಾರವೂ